# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 412 |
| ಸದಸ್ಯರ ಹೆಸರು | : | ಶ್ರೀಮತಿ ಭಾರತಿ ಶೆಟ್ಟಿ<br>(ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : | 15.09.2022 |
| ಉತ್ತರಿಸುವ ಸಚಿವರು | : | ಗೃಹ ಸಚಿವರು |

| ಕ್ರಸ | ಪ್ರಶ್ನೆ | ಉತ್ತರ |
|---|---|---|
| ಅ | ಸೂಕ್ಷ್ಮ ಪ್ರದೇಶಗಳು ಎಂದರೇನು; ಪೊಲೀಸ್ ಇಲಾಖೆಯಲ್ಲಿ ಸೂಕ್ಷ್ಮ ಪ್ರದೇಶ ಎಂಬ ಪದಗಳ ಬಳಕೆ ಎಷ್ಟು ವರ್ಷಗಳಿಂದ ಬಳಕೆಯಲ್ಲಿದೆ; | ಒಂದು ನಿರ್ದಿಷ್ಟ ಅವಧಿಯಲ್ಲಿ ಅತೀ ಹೆಚ್ಚು ಪ್ರಕರಣಗಳು ಒಂದೇ ಅಪರಾಧಗಳ ಅಡಿಯಲ್ಲಿ ಅಂದರೆ ಕೋಮು ಗಲಭೆ, ಬಲವಂತ ಮತಾಂತರ, ಜಾತಿ ಗಲಭೆಗಳು, ಎಸ್‌ಸಿ/ಎಸ್‌ಟಿ ವಿರುದ್ಧ ಅಪರಾಧಗಳು, ಮಹಿಳೆಯ ವಿರುದ್ಧ ಅಪರಾಧಗಳು, ಅಸ್ತಿ ಅಪರಾಧಗಳು, ರೌಡಿಸಂ, ಅಂತರಾಜ್ಯ ಗಡಿ ವಿವಾದ ಅಥವಾ ಭಾಷಾ ಗಲಭೆಗಳು ಇತ್ಯಾದಿ ಗಮನಾರ್ಹವಾದರೆ ಅಂತಹ ಪ್ರಕರಣಗಳ ಅಪರಾಧ ಮತ್ತು ಕಾನೂನು ಸುವ್ಯವಸ್ಥೆಯ ಪರಸ್ಥಿತಿಗೆ ಅನುಗುಣವಾಗಿ ಸೂಕ್ಷ್ಮ ಪ್ರದೇಶ ಎಂದು ಕರೆಯಲಾಗುತ್ತದೆ.<br><br>ಅಗತ್ಯಕ್ಕೆ ತಕ್ಕಂತೆ ಪೊಲೀಸ್ ಇಲಾಖೆಯಲ್ಲಿ ಸೂಕ್ಷ್ಮ ಪ್ರದೇಶ ಎಂಬ ಪದ ಬಳಕೆಯಲ್ಲಿದೆ. |
| ಆ | ಸೂಕ್ಷ್ಮ ಪ್ರದೇಶಗಳು ಸೃಷ್ಟಿಯಾಗಲು ಕಾರಣಗಳೇನು; (ಮಾಹಿತಿ ನೀಡುವುದು) | ಒಂದು ನಿರ್ದಿಷ್ಟ ಅವಧಿಯಲ್ಲಿ ಅತೀ ಹೆಚ್ಚು ಪ್ರಕರಣಗಳು ಒಂದೆ ಅಪರಾಧಗಳ ಅಡಿಯಲ್ಲಿ, ಕೋಮು ಗಲಭೆ, ಬಲವಂತ ಮತಾಂತರ, ಜಾತಿ ಗಲಭೆಗಳು, ಎಸ್‌ಸಿ/ಎಸ್‌ಟಿ ವಿರುದ್ಧ ಅಪರಾದಗಳು, ಮಹಿಳೆಯ ವಿರುದ್ಧ ಅಪರಾಧಗಳು, ಅಸ್ತಿ ಅಪರಾಧಗಳು, ರೌಡಿಸಂ, ಅಂತರಾಜ್ಯ ಗಡಿ ವಿವಾದ, ಭಾಷಾ ಗಲಭೆಗಳು ಇವೇ ಮುಂತಾದ ಪ್ರಕರಣಗಳು ಘಟಿಸುವುದರಿಂದ, ಸೂಕ್ಷ್ಮ ಪ್ರದೇಶಗಳು ಸೃಷ್ಟಿಯಾಗುತ್ತವೆ. |
| ಇ | ಸೂಕ್ಷ್ಮ ಪ್ರದೇಶಗಳ ಸೃಷ್ಟಿಗೆ ಕಾರಣಗಳನ್ನು ಯಾವ ರೀತಿ ಗುರುತಿಸಲಾಗುತ್ತದೆ; ಇದರ ಸೃಷ್ಟಿಗೆ ಕಾರಣಕರ್ತರಾದವರ ವಿರುದ್ಧ ಕ್ರಮ ಕೈಗೊಳ್ಳಲು ಪ್ರಸ್ತುತ ಕಾನೂನು ನಿಯಮಗಳು ಸಮರ್ಪಕವಾಗಿದೆಯೇ ಹಾಗೂ ಇದನ್ನು ಮತ್ತಷ್ಟು ಬಲಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಒಂದು ನಿರ್ದಿಷ್ಟ ಅವಧಿಯಲ್ಲಿ ಅತೀ ಹೆಚ್ಚು ಪ್ರಕರಣಗಳು ಒಂದೆ ಅಪರಾಧಗಳ ಅಡಿಯಲ್ಲಿ ಗಮನಾರ್ಹವಾದರೆ ಸದರಿ ಸ್ಥಳ ಅಥವಾ ಪ್ರದೇಶವನ್ನು ಅಪರಾಧಕ್ಕೆ ಸಂಬಂಧಿಸಿದಂತೆ ಸೂಕ್ಷ್ಮ ಎಂದು ಕೆರೆಯಲಾಗುತ್ತದೆ.ಇದರ ಸೃಷ್ಟಿಗೆ ಕಾರಣಕರ್ತರಾದ ವಿರುದ್ಧ ಕ್ರಮಕೈಗೊಳ್ಳಲು ಪ್ರಸ್ತುತ ಕೆಲವು ಕಾನೂನು ನಿಯಮಗಳು ಈ ಕೆಳಕಂಡಂತಿದೆ.<br>➢ ಠಾಣೆಗಳಲ್ಲಿ ಕಮ್ಯೂನಲ್ ಗೂಂಡಾ ರೌಡಿ ಶೀಟರ್‌ಗಳನ್ನು ಗುರುತಿಸಿ ಅವರ ಮೇಲೆ ಸೂಕ್ತ ನಿಗಾ ವಹಿಸಲಾಗುತ್ತಿದೆ.<br>➢ ಕರ್ನಾಟಕ ಪೊಲೀಸ್ ಮ್ಯಾನ್ಯೂಯಲ್ ಆದೇಶ 1052, |

| | | |
|---|---|---|
| | | 1059 ಪ್ರಕಾರ ರೌಡಿ ಶೀಟ್ ಮತ್ತು ಹಿಸ್ಟರಿ ಶೀಟ್ ರಿಜಿಸ್ಟರ್‌ಗಳನ್ನು ಆರಂಭಿಸಿ ರೌಡಿಗಳ ಮೇಲೆ ಸೂಕ್ತ ನಿಗಾ ವಹಿಸಲಾಗುವುದು.<br>➢ ಹೇಯ ಅಪರಾಧಗಳಲ್ಲಿ ತೊಡಗುವವರ ವಿರುದ್ಧ ಕಲಂ 55, 56 ಕೆ.ಪಿ. ಕಾಯ್ದೆ ಪ್ರಕಾರ ಗಡಿಪಾರು ಮಾಡುವಂತೆ ಸೂಕ್ತ ಕ್ರಮ ಜರುಗಿಸಲಾಗುವುದು.<br>➢ ಗೂಂಡಾ ಕಾಯ್ದೆ, 1985 ರ ಪ್ರಕಾರ ಅಪರಾಧಿಗಳು ಮೇಲೆ ಸೂಕ್ತ ಮುಂಜಾಗ್ರತ ಕ್ರಮ ವಹಿಸಲಾಗುವುದು<br>➢ ಸಿಆರ್‌ಪಿಸಿ 107, 108, 109, 110 ಪ್ರಕಾರ ಅಪರಾಧಿ ಮತ್ತು ಸಂದೇಹಾಸ್ಪದ ವ್ಯಕ್ತಿಗಳ ಮೆಲೆ ಸೂಕ್ತ ಕಾನೂನು ಕ್ರಮ ಜರುಗಿಸುವುದು.<br>➢ ನ್ಯಾಯಾಲಯ ವತಿಯಿಂದ ಬೇರೆ ಕೇಸುಗಳಲ್ಲಿ ಜಾರಿಗೊಳಿಸಲಾದ ವಾರೆಂಟ್‌ಗಳನ್ನು ಪ್ರಾಮಾಣಿಕವಾಗಿ ಕಾರ್ಯಗತಗೊಳಿಸಬೇಕು ಯಾವುದಾದರು ವ್ಯಕ್ತಿಯು ಪರಾರಿಯಾದಲ್ಲಿ ಅಥವಾ ತನ್ನನ್ನು ಮರೆಮಾಡಿ ಘೋಷಿತ ಅಪರಾಧಿಗಳೆಂದು ಘೋಷಿಸಲಾಗುತ್ತದೆ. ವಾರೆಂಟನ್ನು ಜಾರಿಗೊಳಿಸುವಲ್ಲಿ ವಿಫಲರಾದಲ್ಲಿ ಅಂತಹ ವ್ಯಕ್ತಿಯನ್ನು ಸಿಆರ್‌ಪಿಸಿ 82 ರ ಪ್ರಕಾರ ಅಂತವರ ಆಸ್ತಿಯನ್ನು ಸೆಕ್ಷನ್ 83 ಸಿಆರ್‌ಪಿಸಿ ಪ್ರಕಾರ ಮುಟ್ಟುಗೋಲು ಹಾಕಲು ಆರಂಭಿಸಲಾಗುತ್ತದೆ. |

ಹೆಚ್‌ಡಿ 523 ಎಸ್‌ಎಸ್‌ಟಿ 2022

(ಆರಗ ಜ್ಞಾನೇಂದ್ರ)
ಗೃಹ ಸಚಿವರು